173(361) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವನ ಬಾಗೇವಾಡಿ ತಾಲ್ಲೂಕು ಇಂಗಳೇಶ್ವರ ಗ್ರಾಮವನ್ನು ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರದಲ್ಲಿ ಸೇರಿಸಲಾಗಿದೆಯೇ?

ಆ) ಇಂಗಳೇಶ್ವರ ಗ್ರಾಮವನ್ನು ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರದಲ್ಲಿ ಸೇರಿಸಿ ಅಭಿವೃದ್ಧಿ ಪಡಿಸಬೇಕೆಂಬ ಬೇಡಿಕೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಸರಕಾರವು ಈ ಬಗ್ಗೆ ಕೈಗೊಂಡಿರುವ ಕ್ರಮವೇನು?

ಈ) ಅಭಿವೃದ್ಧಿಪಡಿಸುವುದಾದಲ್ಲಿ ಯಾವ ನಿರ್ದಿಷ್ಟ ಕಾಲಮಿತಿಯೊಳಗೆ ಪ್ರಾಧಿಕಾರದಲ್ಲಿ ಸೇರಿಸಿ ಅಭಿವೃದ್ಧಿಪಡಿಸಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಇಲ್ಲ.

ಆ) ಬಂದಿದೆ.

ಇ) ಪರಿಶೀಲನೆಯಲ್ಲಿದೆ.

ಈ) ಸದ್ಯಕ್ಕೆ ಉದ್ಭವಿಸುವುದಿಲ್ಲ.

174(348) ಶ್ರೀ ಶಿವರಾಮು ಬಿ. (ಗಂಡಸಿ): ಮಾನ್ಯ ಮೀನುಗಾರಿಕೆ, ಮುಜರಾಯಿ ಹಾಗೂ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರವಣಬೆಳಗೊಳದ ಮಹಾಮಸ್ತಕಾಭಿಶೇಕಕ್ಕೆ ಸರ್ಕಾರದಿಂದ ಮಂಜೂರಾತಿಯಾಗಿರುವ ಮೊತ್ತ ಎಷ್ಟು ಮತ್ತು ಬಿಡುಗಡೆಯಾಗಿರುವ ಮೊತ್ತವೆಷ್ಟು;

ಆ) ಯಾವಾವ ಇಲಾಖೆಗೆ ಮಂಜೂರಾತಿಯಾಗಿದೆ ಮತ್ತು ಬಿಡುಗಡೆಯಾಗಿರುವ ಮೊತ್ತವೆಷ್ಟು (ಇಲಾಖಾವಾರು, ಮಂಜೂರಾತಿ ಪಟ್ಟಿಯನ್ನು ಒದಗಿಸುವುದು)

ಇ) ಯಾವ ಉದ್ದೇಶಕ್ಕೆ ಹಣ ಬಿಡುಗಡೆಯಾಗಿರುತ್ತದೆ, ಆ ಉದ್ದೇಶ ಸಕಾಲದಲ್ಲಿ ಅನುಷ್ಠಾನಗೊಂಡಿರುತ್ತದೆಯೇ;

ಈ) ಹಾಗಿಲ್ಲದಿದ್ದಲ್ಲಿ, ಕಾರಣವೇನು;

ಉ) ಮಂಜೂರಾತಿಗಿಂತ ಹೆಚ್ಚುವರಿ ಮೊತ್ತದ ಬೇಡಿಕೆ ಬಂದಿದ್ದರೆ ಯಾವ ಕಾರಣಕ್ಕೆ ಮತ್ತು ಯಾವ ಇಲಾಖೆಯಿಂದ ಬಂದಿರುತ್ತದೆ ತಿಳಿಸುವುದು?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ, ಮುಜರಾಯಿ ಹಾಗೂ ತೋಟಗಾರಿಕೆ ಸಚಿವರು):

ಅ) ಸರ್ಕಾರದಿಂದ ರೂ.115.00 ಕೋಟಿ ಅನುದಾನ ಮಂಜೂರಾಗಿರುತ್ತದೆ. ರೂ.114,99,99,500,00 ಬಿಡುಗಡೆ ಮಾಡಲಾಗಿರುತ್ತದೆ.

ಆ) ಮಂಜೂರಾತಿಯಾಗಿ ಬಿಡುಗಡೆ ಮಾಡಲಾದ ಇಲಾಖಾವಾರು ವಿವರ <u>ಅನುಬಂಧ–1</u> ರಲ್ಲಿ ಲಗತ್ತಿಸಿದೆ.